# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ಅಮೃತ ಭೂಮಿ ಯೋಜನಾ ಅನುಷ್ಠಾನ ಘಟಕ ಸ್ಥಾಪನೆ ಬಗ್ಗೆ

ಸರ್ಕಾರಿ ಆದೇಶ ಸಂಖ್ಯೆ:ಕೃತೋಇ/26/ಕೃಉಇ/2010, ಬೆಂಗಳೂರು,
ದಿನಾಂಕ 11ನೇ ಜನವರಿ 2012

ಓದಲಾಗಿದೆ:-1) ಸರ್ಕಾರಿ ಆದೇಶ ಸಂಖ್ಯೆ: ಕೃತೋಇ/103/ಕೃಉಇ/2008,
ದಿನಾಂಕ 29.08.2008.

2) ಸರ್ಕಾರಿ ಆದೇಶ ಸಂಖ್ಯೆ:ಕೃತೋಇ/131/ಕೃಉಇ/2009(ಭಾಗ-1),
ದಿನಾಂಕ 30.12.2009

ಪ್ರಸ್ತಾವನೆ:-

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯ ಮಟ್ಟದ ಸಾವಯವ ಕೃಷಿ ಮಿಷನ್ ಅಧಿಕಾರಯುಕ್ತ ಸಮಿತಿಯನ್ನು ರಚಿಸಲಾಗಿದೆ. ರಾಜ್ಯದಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸುವ ಉದ್ದೇಶದಿಂದ ಅಧಿಕಾರೇತರ ಸದಸ್ಯರು ಅಧಿಕಾರಿ ಸದಸ್ಯರನ್ನೊಳಗೊಂಡಂತೆ ಅಧಿಕಾರಯುಕ್ತ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ನಿರ್ವಹಿಸಬೇಕಾದಂತಹ ಕೆಲಸ ಕಾರ್ಯಗಳು ಮತ್ತು ಜವಾಬ್ದಾರಿಯನ್ನೂ ಸಹ ನಿಗದಿಪಡಿಸಿದೆ.

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ 2009-10ನೇ ಸಾಲಿನಲ್ಲಿ ರಾಜ್ಯ ಸಾವಯವ ಕೃಷಿ ಮಿಷನ್‌ನ ಕಾರ್ಯಕ್ರಮಗಳನ್ನು ಕೆಲವು ಷರತ್ತುಗಳನ್ನೊಳಪಡಿಸಿ ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ವಿವೇಚನಾ ರಹಿತವಾಗಿ ರಸಾಯನಿಕ ಗೊಬ್ಬರಗಳ, ಕಳೆ ನಾಶಕಗಳ ಮತ್ತು ಪೀಡೆನಾಶಕಗಳ ಬಳಕೆಯು ಪರಿಸರದ ಮೇಲೆ ಮತ್ತು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿದೆಯಲ್ಲದೇ ಸಾಮಾಜಿಕ-ಆರ್ಥಿಕ ಸಮಸ್ಯೆಗಳನ್ನು ಉಂಟು ಮಾಡಿದೆ. ಈ ಸಮಸ್ಯೆಗಳನ್ನು ಗುರುತಿಸಿ ಮತ್ತು ಕೃಷಿ ರಸಾಯನಿಕಗಳ ಮೇಲೆ ರೈತರ ಅವಲಂಬನೆಯನ್ನು ಕಡಿಮೆ ಮಾಡಲು ಕರ್ನಾಟಕ ರಾಜ್ಯ ಸರ್ಕಾರವು 2008 ರಲ್ಲಿ ಕರ್ನಾಟಕ ಸಾವಯವ ಕೃಷಿ ಮಿಷನ್ ಅನ್ನು ಸ್ಥಾಪಿಸಿರುತ್ತದೆ. ಸಾವಯವ ಕೃಷಿಯನ್ನು ಉತ್ತೇಜಿಸಲು ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರುಗಳನ್ನೊಳಗೊಂಡ ಅಧಿಕಾರಯುಕ್ತ ಸಮಿತಿಯನ್ನು ರಚಿಸಲಾಗಿರುತ್ತದೆ. ಅಧಿಕಾರಯುಕ್ತ ಸಮಿತಿಯು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು, ಮಾರ್ಗಸೂಚಿಗಳನ್ನು ನಿಯಂತ್ರಣ ವ್ಯವಸ್ಥೆ ರೂಪಿಸುವುದು, ಸರ್ಕಾರದ ರಿಯಾಯಿತಿ ಮಟ್ಟ ಮತ್ತು ಪ್ರಮಾಣವನ್ನು ಗುರುತಿಸುವುದು, ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಿ ಆಯ್ಕೆ ಮಾಡುವುದು, ಮಾರುಕಟ್ಟೆಗೆ ವೇದಿಕೆ ಕಲ್ಪಿಸುವುದು ಮುಂತಾದ ಉದ್ದೇಶಗಳನ್ನು ಹೊಂದಿರುತ್ತದೆ. ಅಧಿಕಾರಯುಕ್ತ ಸಮಿತಿಯು ತನ್ನ ಉದ್ದೇಶಗಳ ಅನುಷ್ಠಾನಕ್ಕಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರೂ ಸಹ ಕೆಲವು ಸಮಸ್ಯೆಗಳು ಹಾಗೂ ಸಮನ್ವಯದ ಕೊರತೆ ಹಾಗೇ ಉಳಿದುಕೊಂಡಿರುತ್ತದೆ. ಮುಂದುವರೆದು ಸರ್ಕಾರವು ಸಾವಯವ ಕೃಷಿಗೆ ನೀಡಿರುವ ಮಹತ್ವವನ್ನು ಗಮನಿಸಿದಾಗ, ನೀತಿ, ನಿರ್ದೇಶನಗಳನ್ನು ಉನ್ನತ ಮಟ್ಟದಲ್ಲಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಬೇಕಾಗಿರುತ್ತದೆ.

ಸರ್ಕಾರವು ಸಾವಯವ ಕೃಷಿಯನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನದ ಉದ್ದೇಶದಿಂದ ಸಾವಯವ ಕೃಷಿಯ ಪ್ರಸಾರವನ್ನು ಕೈಗೊಳ್ಳಲಾಯಿತು. ಈ ದಿಸೆಯಲ್ಲಿ ಅಮೃತಭೂಮಿ ಟ್ರಸ್ಟ್‌ನ್ನು ಸ್ಥಾಪಿಸುವ ಸಲುವಾಗಿ ಸಚಿವ ಸಂಪುಟ ಮುಂದೆ ಪ್ರಸ್ತಾಪಿಸಲಾಯಿತು.

ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆಯಲಾಗಿ, ಅದರಲ್ಲಿ ಟ್ರಸ್ಟ್ ಬದಲು ಸೊಸೈಟಿ ರಚಿಸಲು ಹಾಗೂ ಹಣ ಹರಿಯುವ ಮಾರ್ಗದರ್ಶನ ಮತ್ತು ಆರ್ಥಿಕ ನಿರ್ವಹಣೆ - ಇತ್ಯಾದಿ ಬಗ್ಗೆ ರೂಪುಗೊಳಿಸಬೇಕೆಂದು ಅಭಿಪ್ರಾಯಿಸಲಾಗಿತ್ತು. ಆದಾಗ್ಯೂ ಸೊಸೈಟಿಯ ಉತ್ಸುವಾರಿ ತುಂಬಾ ಕಷ್ಟಕರ. ಆದ್ದರಿಂದ ಯೋಜನಾ ರೀತಿಯ ಮಾದರಿಯನ್ನು ಈ ಹಿಂದೆ ಬಾಹ್ಯ ಅನುದಾನ ರೀತಿಯಲ್ಲಿ ಪ್ರಸ್ತಾಪಿಸಲಾಗಿದೆ. ಆದ್ದರಿಂದ ಈ ಯೋಜನೆಗೆ ಪ್ರತ್ಯೇಕ ಅಸ್ತಿತ್ವ ಇರುವುದಿಲ್ಲ ಹಾಗೂ ಇಲಾಖೆಯಿಂದ ದೂರವಿರುತ್ತದೆ. ಆದಾಗ್ಯೂ, ಸುಲಲಿತ ಅನುಷ್ಠಾನಕ್ಕೆ ಸಹಾಯಕರವಾಗಿರುತ್ತದೆ. ಆದ್ದರಿಂದ ಯೋಜನಾ ಮಾದರಿಯನ್ನು ರೂಪಿಸಲಾಗಿದೆ.

ಕರ್ನಾಟಕ ಅಮೃತ ಭೂಮಿ ಯೋಜನೆ ಎಂಬುದಾಗಿ ಮಾಡಬೇಕಾಗಿದೆ. ಯೋಜನಾ ಅವಧಿಯು ಮೊದಲಿಗೆ ಐದು ವರ್ಷದ್ದಾಗಿರುತ್ತದೆ ಮತ್ತು ತದನಂತರ ಸರ್ಕಾರ ಅಪೇಕ್ಷಿಸಿದಲ್ಲಿ ಯೋಜನೆಯನ್ನು ಮುಂದುವರೆಸಬಹುದಾಗಿರುತ್ತದೆ. ಕರ್ನಾಟಕ ಅಮೃತ ಭೂಮಿ ಯೋಜನೆಯು ಕೃಷಿ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿರುತ್ತದೆ.

ಯೋಜನೆಯ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿದೆ.

ಅ. ಆಯ್ಕೆಯಾದ ಯೋಜನೆಯ ಕ್ಷೇತ್ರದಲ್ಲಿ ರೈತರ ಆದಾಯವನ್ನು ಹೆಚ್ಚಿಸುವುದರ ಬಗ್ಗೆ..
. ಸುಸ್ಥಿರ ಕೃಷಿ ಮಟ್ಟವನ್ನು ಕಾಪಾಡುವುದು.
ಆ. ಸಾವಯವ ಕೃಷಿಯಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು.
ಇ. ಹೊಸ ಕೃಷಿ ತಂತ್ರಜ್ಞಾನತೆ ಮತ್ತು ಬೇಸಾಯ ಕ್ರಮಗಳನ್ನು ಪರಿಚಯಿಸುವುದು.
ಅ. ಪರಿಸರವನ್ನು ಸಂರಕ್ಷಿಸುವುದು
ಆ. ನೈಸರ್ಗಿಕ ಸಂಪನ್ಮೂಲವಾದ ಮಣ್ಣು ಮತ್ತು ನೀರು ಸೇರಿದಂತೆ ಸಂರಕ್ಷಿಸುವುದು.
ಇ. ಬಳಕೆದಾರರಿಗೆ ಸಾವಯವ ಉತ್ಪನ್ನದ ಬಗ್ಗೆ ಅರಿವು ಮೂಡಿಸುವುದು ಮತ್ತು ಬೇಡಿಕೆಯನ್ನು ಹೆಚ್ಚು ಮಾಡುವುದು
ಈ. ಪ್ರಮಾಣೀಕರಣ, ಶ್ರೇಣಿ ಮಾರುಕಟ್ಟೆಯ ಬಗ್ಗೆ ಅವಶ್ಯಕವಾದ ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸುವುದು.

ಯೋಜನೆಯ ಅನುಷ್ಠಾನಕ್ಕೆ ಸಾಂಸ್ಥಿಕ ವ್ಯವಸ್ಥೆ

ಯೋಜನೆಯ ಅನುಷ್ಠಾನಕ್ಕಾಗಿ ಬಹುಮಟ್ಟದ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಲಾಗಿದೆ.

## (a) ಯೋಜನಾ ಆಡಳಿತ ಮಂಡಳಿ (Project Governing Board(PGB):

ಯೋಜನಾ ಆಡಳಿತ ಮಂಡಳಿಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗುವುದು. ಮಂಡಳಿಯ ಇತರೆ ಸದಸ್ಯರು ಈ ಕೆಳಕಂಡಂತೆ ಇರುತ್ತಾರೆ.

(i) ಮಾನ್ಯ ಕೃಷಿ ಸಚಿವರು
(ii) ಮಾನ್ಯ ತೋಟಗಾರಿಕೆ ಸಚಿವರು
(iii) ಮಾನ್ಯ ರೇಷ್ಮೆ ಕೃಷಿ ಸಚಿವರು

(iv) ಸಾವಯವ ಕೃಷಿ ಮಿಷನ್ ಅಧ್ಯಕ್ಷರು

(v) ಮುಖ್ಯ ಕಾರ್ಯದರ್ಶಿಗಳು

(vi) ಅಭಿವೃದ್ಧಿ ಆಯುಕ್ತರು.

(vii) ರಾಜ್ಯದ ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು.

(viii) ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ.

(ix) ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ.

(x) ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ

(xi) ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ.

(xii) ಪ್ರಧಾನ ಕಾರ್ಯದರ್ಶಿಗಳು, ರೇಷ್ಮೆ ಇಲಾಖೆ

(xiii) ಮಾನ್ಯ ಮುಖ್ಯಮಂತ್ರಿಗಳಿಂದ ನಾಮಕರಣಗೊಂಡ ಸಾವಯವ ಕೃಷಿಕರು (ಪ್ರತಿ ಕಂದಾಯ ವಿಭಾಗದಿಂದ ಒಬ್ಬ ಕೃಷಿಕರು)

(xiv) ಮುಖ್ಯ ಯೋಜನಾ ಅಧಿಕಾರಿ-ಸದಸ್ಯ ಕಾರ್ಯದರ್ಶಿ.

ಸಮಿತಿಗೆ ಯೋಜನೆಗಳನ್ನು ರೂಪಿಸುವ, ರಿಯಾಯಿತಿಗೆ ಅನುಮೋದನೆ ನೀಡುವ, ಯೋಜನೆಯ ನೀತಿ ಮತ್ತು ಅನುಷ್ಠಾನ ಮಾರ್ಗಸೂಚಿ ನೀಡುವ, ಯೋಜನೆಗಳನ್ನು ಅನುಮೋದಿಸುವ, ಹುದ್ದೆಗಳನ್ನು ಸೃಷ್ಟಿಸುವ, ಆಯವ್ಯಯಕ್ಕೆ ಅನುಮೋದಿಸುವ ಹಾಗೂ ಇತರೆ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ನಿರ್ಣಯ ಕೈಗೊಳ್ಳುವ ಮತ್ತು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅವಶ್ಯವಿರುವ ಯಾವುದೇ ನಿರ್ಣಯ ಕೈಗೊಳ್ಳುವ ಅಧಿಕಾರವಿರುತ್ತದೆ. ಅವಶ್ಯಕತೆ ಆಧರಿಸಿ ಸಮಿತಿಯ ಸಭೆ ಕರೆಯಲಾಗುತ್ತದೆ.

**(b) ಯೋಜನಾ ಅನುಷ್ಠಾನ ಸಮಿತಿ (Project Implementation Committee (PIC):**

ಯೋಜನಾ ಆಡಳಿತ ಮಂಡಳಿಯ ಸಭೆಯನ್ನು ಆಗಿಂದಾಗ್ಗೆ ಕರೆಯಲು ಸಾಧ್ಯವಾಗದ ದೃಷ್ಟಿಯಿಂದ ಒಟ್ಟಾರೆ ಯೋಜನಾ ಅನುಷ್ಠಾನವನ್ನು ಪರಿಶೀಲಿಸಲು ಉನ್ನತ ಮಟ್ಟದ ಹಲವು ಇಲಾಖೆಗಳನ್ನೊಳಗೊಂಡ ಸಮಿತಿಯನ್ನು ರಚಿಸುವ ಅವಶ್ಯಕತೆ ಇರುತ್ತದೆ ಎಂದು ಉದ್ದೇಶಿಸಲಾಗಿರುತ್ತದೆ. ಈ ಉದ್ದೇಶದಿಂದ ಯೋಜನಾ ಅನುಷ್ಠಾನ ಸಮಿತಿಯನ್ನು ರಚಿಸಲಾಗಿದೆ. ಯೋಜನಾ ಅನುಷ್ಠಾನ ಸಮಿತಿಗೆ ಸಾವಯವ ಕೃಷಿ ಮಿಷನ್ ಅಧ್ಯಕ್ಷರಾಗಿರುತ್ತಾರೆ. ಸಮಿತಿಯ ಇತರೆ ಸದಸ್ಯರುಗಳು ;

(i) ನಿರ್ದೇಶಕರು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ.

(ii) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ.

(iii) ನಿರ್ದೇಶಕರು, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.

(iv) ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಕರ್ನಾಟಕ ಸರ್ಕಾರ.

(v) ನಿರ್ದೇಶಕರು, ರೇಷ್ಮೆ ಇಲಾಖೆ, ಕರ್ನಾಟಕ ಸರ್ಕಾರ.

(vi) ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ.

(vii) ಎರಡು ಸಾವಯವ ಕೃಷಿ ರೈತರು / ಪ್ರತಿ ಕಂದಾಯ ವಿಭಾಗದಲ್ಲಿ ಸಾವಯವ ಕೃಷಿ ಪದ್ಧತಿಗಳನ್ನು ಅನುಸರಿಸಿ ಕೆಲಸ ಮಾಡುತ್ತಿರುವ ವಿಜ್ಞಾನಿಗಳು

(viii) ಮುಖ್ಯ ಯೋಜನಾ ಅಧಿಕಾರಿ, ಕರ್ನಾಟಕ ಅಮೃತಭೂಮಿ ಯೋಜನೆ - ಸದಸ್ಯ ಕಾರ್ಯದರ್ಶಿ.

ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮತ್ತು ನಿಶ್ಚಿತ ಪ್ರಗತಿ ಸಾಧಿಸು ದೃಷ್ಟಿಯಿಂದ ಸಮಿತಿಯು ಯೋಜನೆಯನ್ನು ಸಮನ್ವಯಗೊಳಿಸುತ್ತದೆ ಮತ್ತು ಉಸ್ತುವಾ ಮಾಡುತ್ತದೆ. ಖರೀದಿ ಮತ್ತು ಗುತ್ತಿಗೆ ಆಡಳಿತ ಸೇರಿದಂತೆ ಯೋಜನಾ ಅನುಷ್ಠಾನ ಅವಶ್ಯಕವಿರುವ ಎಲ್ಲಾ ತೀರ್ಮಾನಗಳನ್ನು ಸಮಿತಿಯು ಕೈಗೊಳ್ಳುತ್ತದೆ. ಯೋಜನೆಗ ಉಸ್ತುವಾರಿ/ ಯೋಜನಾ ತಯಾರಿಕೆ, ಯೋಜನಾ ಅನುಷ್ಠಾನ ಮತ್ತು ಯೋಜನಾ ಆಡಳ ಮಂಡಳಿಯ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸಮಿತಿಯು ಆಗಿಂದಾ ಸಭೆ ಸೇರುತ್ತದೆ ಮತ್ತು ಯೋಜನಾ ಆಡಳಿತ ಮಂಡಳಿಯು ನೀಡುವ ನಿರ್ದೇಶನವನು ಪಾಲಿಸುವ ಬಗ್ಗೆ ಖಾತರಿಪಡಿಸುವುದು.

(c) ಅಮೃತ ಭೂಮಿ ಯೋಜನಾ ಅನುಷ್ಠಾನ ಘಟಕ (Amruthabhoomi Projec Implementation Unit (APIU):

ಅನುಮೋದಿತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮುಖ್ಯ ಘಟಕವನ್ನು ಅಮೃತಭೂಮಿ ಯೋಜನಾ ಅನುಷ್ಠಾನ ಘಟಕ (APIU) ಎಂದು ಕರೆಯಲಾಗುವುದು ಮತ್ತು ಇದು ಬೆಂಗಳೂರಿನಲ್ಲಿ ನೆಲೆಸಿರುತ್ತದೆ. ಮುಖ್ಯ ಯೋಜನಾ ಅಧಿಕಾರಿಯು ಘಟಕದ ಮುಖ್ಯಸ್ಥರಾಗಿರುತ್ತಾರೆ. ಈ ಅಧಿಕಾರಿಯು ಸರ್ಕಾರದ ಜಂಟಿ ಕಾರ್ಯದರ್ಶಿ ಅಥವಾ ಅದಕ್ಕಿಂತ ಮೇಲ್ಪಟ್ಟದ ಅಧಿಕಾರಿಯಾಗಿರುತ್ತಾರೆ. ಮುಖ್ಯ ಯೋಜನಾ ನಿರ್ದೇಶಕರು ಮತ್ತು ತಾಂತ್ರಿಕ ಅಧಿಕಾರಿಗಳ ತಂಡವು ಮುಖ್ಯ ಯೋಜನಾ ಅಧಿಕಾರಿಗೆ ಕಾರ್ಯನಿರ್ವಹಣೆಯಲ್ಲಿ ನೆರವು ನೀಡಲಿದೆ.

ಅಮೃತಭೂಮಿ ಯೋಜನಾ ಅನುಷ್ಠಾನ ಘಟಕದ ಕೆಲಸ ಕಾರ್ಯಗಳನ್ನು ರೂಪಿಸಲಾಗಿದೆ.

(d). ಯೋಜನಾ ವಿಭಾಗ (Project Division):-

ನಾಲ್ಕು ಯೋಜನಾ ವಿಭಾಗಗಳನ್ನು ಸೃಷ್ಟಿಸಲು ಮತ್ತು ಇವುಗಳನ್ನು ಪ್ರತಿ ರೆವಿನ್ಯೂ ವಿಭಾಗಗಳಲ್ಲಿ ನೆಲೆಗೊಳಿಸಲು ಉದ್ದೇಶಿಸಲಾಗಿದೆ. ಯೋಜನಾ ವಿಭಾಗಗಳಿಗೆ ಉಪ ಕೃಷಿ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ ಮತ್ತ ಇವರಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು ನೆರವು ನೀಡಲಿದ್ದಾರೆ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯು ಯೋಜನಾ ವಿಭಾಗಗಳದ್ದಾಗಿರುತ್ತದೆ. ಈಗಾಗಲೇ ಚಾಲ್ತಿಯಲ್ಲಿರುವ ನಿಯಮಾನುಸಾರ ಅಥವಾ APIU ತಿಳಿಸುವ ಹೊಸ ನಿಯಮಾನುಸಾರ ಈ ವಿಭಾಗಗಳು ಕಾರ್ಯಕ್ರಮ ಅನುಷ್ಠಾನಗೊಳಿಸಲಿವೆ. ಯೋಜನಾ ಅನುಷ್ಠಾನ ವರದಿ ಮತ್ತು ಸಾಧನೆಗಳನ್ನು ಯೋಜನಾ ವಿಭಾಗಗಳು ನಿಯಮಿತವಾಗಿ APIU ಗೆ ನೀಡಲಿವೆ. ಪ್ರತಿ ಯೋಜನಾ ವಿಭಾಗದ ರಚನೆ ರೂಪಿಸಲಾಗಿದೆ.

**(e). ಸಾವಯವ ಕೃಷಿ ಸಮನ್ವಯ ಸಮಿತಿ (Organic Farming Co-ordination Committee (OFCC):**

ಯೋಜನಾ ಅನುಷ್ಠಾನ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಸಾವಯವ ಕೃಷಿ ಸಮನ್ವಯ ಸಮಿತಿಯನ್ನು ರಚಿಸಲಿದೆ. ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶುಸಂಗೋಪನೆ, ಕಾಡಾ, ನೀರಾವರಿ, ಶಿಕ್ಷಣ ಮುಂತಾದ ಇಲಾಖೆಗಳ ಜಿಲ್ಲಾ ಮುಖ್ಯಸ್ಥರುಗಳು ಮತ್ತು ವಿಜ್ಞಾನಿಗಳು ಸಮಿತಿಯ ಸದಸ್ಯರಾಗಿರುತ್ತಾರೆ. ಯೋಜನಾ ಅನುಷ್ಠಾನ ಸಮಿತಿ ಅನುಮೋದಿತ ಮತ್ತು ನಾಮ ನಿರ್ದೇಶಿತ ಸಾವಯವ ಕೃಷಿಕರ ಗುಂಪುಗಳ ಪ್ರಮುಖ ಸಾವಯವ ಕೃಷಿಕರು ಸಮಿತಿಯ ಸದಸ್ಯರಾಗಿರುತ್ತಾರೆ. ಸಮಿತಿಯು ಆಗಿಂದಾಗ್ಗೆ ಸಭೆ ಸೇರಿ ಯೋಜನ ಅನುಷ್ಠಾನದಲ್ಲಿ ಸ್ಥಳೀಯ ಸಮನ್ವಯತೆ ಸಾಧಿಸಲೆಂದೆ ಮತ್ತು ಸ್ಥಳೀಯ ಸಮಸ್ಯೆಗಳನ್ನು ಇತ್ಯರ್ಥಪಡಿಸಲಿದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಅಮೃತ ಭೂಮಿ ಯೋಜನೆಯನ್ನು ಪ್ರಾರಂಭಿಕವಾಗಿ ಐದು ವರ್ಷದ ಅವಧಿಗೆ ಸೃಜಿಸಲು ಮತ್ತು ಅದರ ವಿವಿಧ ಅನುಷ್ಠಾನ ರಚನೆ ಮತ್ತು ಸಮಿತಿಯ ಕಾರ್ಯಗಳು ಹಾಗೂ ಅಧಿಕಾರಗಳಿಗೆ ಸರ್ಕಾರವು ಆಡಳಿತಾತ್ಮಕ ಆದೇಶ ಹೊರಡಿಸಿದೆ. ಕರ್ನಾಟಕ ಅಮೃತ ಭೂಮಿ ಯೋಜನೆಯು ಕೃಷಿ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿರುತ್ತದೆ ಹಾಗೂ ಈ ಕೆಳಕಂಡವುಗಳಿಗೆ ಸಹ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ :-

1) ಅನುಬಂಧ-1ರಲ್ಲಿರುವಂತೆ ಕರ್ನಾಟಕ ಅಮೃತ ಭೂಮಿ ಯೋಜನೆಗೆ ಅನುಮೋದನೆ

2) ಅನುಬಂಧ-2ರಲ್ಲಿರುವಂತೆ ಕರ್ನಾಟಕ ಅಮೃತ ಭೂಮಿ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಹುದ್ದೆಗಳ ಸೃಜನೆಗೆ ಮಂಜೂರಾತಿ.

3) ಅನುಬಂಧ-3ರಲ್ಲಿರುವಂತೆ ಕರ್ನಾಟಕ ಅಮೃತ ಭೂಮಿ ಯೋಜನೆಯ ಅನುಷ್ಠಾನ ಘಟಕದ ಕೆಲಸ ಕಾರ್ಯಗಳಿಗೆ ಅನುಮೋದನೆ.

4) ಅಮೃತ್ ಭೂಮಿ ಯೋಜನಾ ಅನುಷ್ಠಾನ ಘಟಕಕ್ಕೆ ಪಡೆಯುವ ಎಲ್ಲಾ ಸಂಗ್ರಹಣೆಗಳ ವಿಷಯದಲ್ಲಿ ಅಂದರೆ ಕಾಮಗಾರಿ, ಸೇವೆಗಳು, ಕನ್ಸಲ್ಟೆನ್ಸಿ (Civil works, Services or consultancy) ಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

5) ಕರ್ನಾಟಕ ರಾಜ್ಯ ಸಾವಯವ ಕೃಷಿ ಮಿಷನ್ ಅಸ್ತಿತ್ವವು ಮುಂದುವರೆಯುತ್ತದೆ ಮತ್ತು ಸದರಿ ಮಿಷನ್ ಕಾರ್ಯನೀತಿ ರೂಪಿಸುವ ಹಾಗೂ ಸಲಹಾ ಕ್ರಿಯೆಯನ್ನು ಪಾಲಿಸುವ ಕೆಲಸವನ್ನು ಮಾಡುತ್ತದೆ. ಸರ್ಕಾರದಿಂದ ಅನುಮೋದಿಸಲ್ಪಟ್ಟ, ಪ್ರಸ್ತಾವನೆಯಲ್ಲಿ ತಿಳಿಸಿರುವ

ಕಾರ್ಯಕ್ರಮಗಳನ್ನು ಕರ್ನಾಟಕ ಅಮೃತ ಭೂಮಿ ಯೋಜನೆಯು ಅನುಷ್ಠಾನಗೊಳಿಸುವುದು.

6) ಯೋಜನಾ ಅನುಷ್ಠಾನ ಸಮಿತಿ (Project Implementation Committee (PIC), ಅಮೃತ ಭೂಮಿ ಯೋಜನಾ ಅನುಷ್ಠಾನ ಘಟಕ (Amruthabhoomi Project Implementation Unit (APIU) ಹಾಗೂ ಇತರೆ ಘಟಕಗಳಿಗೆ works & contracts of certain values ಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಹಾಗೂ ಆರ್ಥಿಕ ಅಧಿಕಾರದ ನಿರ್ದಿಷ್ಟತೆಯನ್ನು ಮತ್ತು ಪಾರದರ್ಶಕತೆ, ಸಾಮರ್ಥ್ಯತೆ ಮತ್ತು ಹೊಣೆಗಾರಿಕೆ/ಜವಾಬ್ದಾರಿಯನ್ನು ಖಾತರಿ ಪಡಿಸಲು ಸಾಕಷ್ಟು ಆರ್ಥಿಕತೆ ಮತ್ತು ಲೆಖಾವಿಧಾನವನ್ನು ಪ್ರತ್ಯೇಕವಾಗಿ ನಿಗದಿಪಡಿಸತಕ್ಕದ್ದು (Adequate financial and accounting procedures should be prescribed so as to ensure transparency, efficiency and accountability).

7) ಕೃಷಿ ಇಲಾಖೆಯ ಸಾವಯವ ಕೃಷಿಗೆ ಸಂಬಂಧಪಟ್ಟ ಪ್ರಸ್ತುತ ಎಲ್ಲಾ ಕಾರ್ಯಯೋಜನೆ ಮತ್ತು ಯೋಜನೆ (schemes and projects) ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ನಿಧಿಯನ್ನು ಅಮೃತ ಭೂಮಿ ಯೋಜನಾ ಘಟಕಕ್ಕೆ (APIU) ವರ್ಗಾಯಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 214/Exp-4/2010, ದಿನಾಂಕ 12.9.2011 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: PD 53/ PFO/2011, ದಿನಾಂಕ 6.8.2011 ರಲ್ಲಿ ನೀಡಿದ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

11.01.12
(ಸರಸಾ ),
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ),
ಕೃಷಿ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು(ಎ ಮತ್ತು ಇ) ಮತ್ತು ಆಡಿಟ್, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು.
4. ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಆಡಳಿತ ಸುಧಾರಣೆ).
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ.
13. ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು/ಧಾರವಾಡ/ರಾಯಚೂರು.
14. ಕುಲಪತಿಗಳು, ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ, ಬೀದರ್.
15. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
16. ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
17. ಆಯುಕ್ತರು, ರೇಷ್ಮೆ ಇಲಾಖೆ, ಬೆಂಗಳೂರು.
18. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಪಶುಸಂಗೋಪನೆ ಇಲಾಖೆ, ಮೀನುಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಮತ್ತು ಕೃಷಿ ಮಾರುಕಟ್ಟೆ ಇಲಾಖೆ, ಬೆಂಗಳೂರು.
19. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
20. ನಿರ್ದೇಶಕರು, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರುಘಟ್ಟ ಬೆಂಗಳೂರು
21. ನಿರ್ದೇಶಕರು, ಪಿ.ಎಂ.ಐ., ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
22. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು (ಕೃಷಿ ಆಯುಕ್ತರ ಮುಖಾಂತರ)
23. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕೃಷಿ ಆಯುಕ್ತರ ಮುಖಾಂತರ).
24. ರಾಜ್ಯ ಸಾವಯವ ಕೃಷಿ ಮಿಷನ್‌ನ ಎಲ್ಲಾ ಅಧಿಕಾರೇತರ ಸದಸ್ಯರುಗಳು (ಕೃಷಿ ಆಯುಕ್ತರ ಮುಖಾಂತರ)
25. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು.
26. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ.
27. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ.
28. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-4.
29. ಸಚಿವ ಸಂಪುಟ ಶಾಖೆಯ (ಕಾರ್ಯಸೂಚಿ-2, ದಿನಾಂಕ 28.10.2011).
30. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ-1

## ಕರ್ನಾಟಕ ಅಮೃತ ಭೂಮಿ ಯೋಜನೆ

1) **ಯೋಜನೆಯ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿದೆ.**

ಅ. ಆಯ್ಕೆಯಾದ ಯೋಜನೆಯ ಕ್ಷೇತ್ರದಲ್ಲಿ ರೈತರ ಆದಾಯವನ್ನು ಹೆಚ್ಚಿಸುವುದರ ಬಗ್ಗೆ ಸುಸ್ಥಿರ ಕೃಷಿ ಮಟ್ಟವನ್ನು ಕಾಪಾಡುವುದು.

ಆ. ಸಾವಯವ ಕೃಷಿಯಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು.

ಇ. ಹೊಸ ಕೃಷಿ ತಂತ್ರಜ್ಞಾನತೆ ಮತ್ತು ಬೇಸಾಯ ಕ್ರಮಗಳನ್ನು ಪರಿಚಯಿಸುವುದು.

ಈ. ಪರಿಸರವನ್ನು ಸಂರಕ್ಷಿಸುವುದು

ಉ. ನೈಸರ್ಗಿಕ ಸಂಪನ್ಮೂಲವಾದ ಮಣ್ಣು ಮತ್ತು ನೀರು ಸೇರಿದಂತೆ ಸಂರಕ್ಷಿಸುವುದು.

ಊ. ಬಳಕೆದಾರರಿಗೆ ಸಾವಯವ ಉತ್ಪನ್ನದ ಬಗ್ಗೆ ಅರಿವು ಮೂಡಿಸುವುದು ಮತ್ತು ಬೇಡಿಕೆಯನ್ನು ಹೆಚ್ಚು ಮಾಡುವುದು

ಋ. ಪ್ರಮಾಣೀಕರಣ, ಶ್ರೇಣಿ ಮಾರುಕಟ್ಟೆಯ ಬಗ್ಗೆ ಅವಶ್ಯಕವಾದ ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸುವುದು.

2) **ಯೋಜನೆಯ ಅನುಷ್ಠಾನಕ್ಕೆ ಸಾಂಸ್ಥಿಕ ವ್ಯವಸ್ಥೆ**

ಯೋಜನೆಯ ಅನುಷ್ಠಾನಕ್ಕಾಗಿ ಬಹುಮಟ್ಟದ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಲಾಗಿದೆ.

**(a) ಯೋಜನಾ ಆಡಳಿತ ಮಂಡಳಿ (Project Governing Board(PGB):**

ಯೋಜನಾ ಆಡಳಿತ ಮಂಡಳಿಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಮಂಡಳಿಯ ಇತರೆ ಸದಸ್ಯರನ್ನೊಳಗೊಂಡಂತೆ ರಚಿಸಲಾಗಿದೆ:-

(i) ಮಾನ್ಯ ಕೃಷಿ ಸಚಿವರು
(ii) ಮಾನ್ಯ ತೋಟಗಾರಿಕೆ ಸಚಿವರು
(iii) ಮಾನ್ಯ ರೇಷ್ಮೆ ಕೃಷಿ ಸಚಿವರು
(iv) ಸಾವಯವ ಕೃಷಿ ಮಿಷನ್ ಅಧ್ಯಕ್ಷರು
(v) ಮುಖ್ಯ ಕಾರ್ಯದರ್ಶಿಗಳು
(vi) ಅಭಿವೃದ್ಧಿ ಆಯುಕ್ತರು.
(vii) ರಾಜ್ಯದ ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು.
(viii) ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ.
(ix) ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ.
(x) ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ
(xi) ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ.
(xii) ಪ್ರಧಾನ ಕಾರ್ಯದರ್ಶಿಗಳು, ರೇಷ್ಮೆ ಇಲಾಖೆ

(xiii) ಮಾನ್ಯ ಮುಖ್ಯಮಂತ್ರಿಗಳಿಂದ ನಾಮಕರಣಗೊಂಡ ಸಾವಯವ ಕೃಷಿಕರು-(ಪ್ರತಿ ಕಂದಾಯ ವಿಭಾಗದಿಂದ ಒಬ್ಬ ಕೃಷಿಕರು).

(xiv) ಮುಖ್ಯ ಯೋಜನಾ ಅಧಿಕಾರಿ–ಸದಸ್ಯ ಕಾರ್ಯದರ್ಶಿ.

ಸಮಿತಿಗೆ ಯೋಜನೆಗಳನ್ನು ರೂಪಿಸುವ, ರಿಯಾಯಿತಿಗೆ ಅನುಮೋದನೆ ನೀಡುವ, ಯೋಜನೆಯ ನೀತಿ ಮತ್ತು ಅನುಷ್ಠಾನ ಮಾರ್ಗಸೂಚಿ ನೀಡುವ, ಯೋಜನೆಗಳನ್ನು ಅನುಮೋದಿಸುವ, ಹುದ್ದೆಗಳನ್ನು ಸೃಷ್ಟಿಸುವ, ಆಯವ್ಯಯಕ್ಕೆ ಅನುಮೋದಿಸುವ ಹಾಗೂ ಇತರೆ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ನಿರ್ಣಯ ಕೈಗೊಳ್ಳುವ ಮತ್ತು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅವಶ್ಯವಿರುವ ಯಾವುದೇ ನಿರ್ಣಯ ಕೈಗೊಳ್ಳುವ ಅಧಿಕಾರವಿರುತ್ತದೆ. ಅವಶ್ಯಕತೆ ಆಧರಿಸಿ ಸಮಿತಿಯ ಸಭೆ ಕರೆಯಲಾಗುವುದು.

**(b) <u>ಯೋಜನಾ ಅನುಷ್ಠಾನ ಸಮಿತಿ (Project Implementation Committee (PIC):</u>**

ಯೋಜನಾ ಆಡಳಿತ ಮಂಡಳಿಯ ಸಭೆಯನ್ನು ಆಗಿಂದಾಗ್ಗೆ ಕರೆಯಲು ಸಾಧ್ಯವಾಗದ ದೃಷ್ಟಿಯಿಂದ ಒಟ್ಟಾರೆ ಯೋಜನಾ ಅನುಷ್ಠಾನವನ್ನು ಪರಿಶೀಲಿಸಲು ಉನ್ನತ ಮಟ್ಟದ ಹಲವು ಇಲಾಖೆಗಳನ್ನೊಳಗೊಂಡ ಸಮಿತಿಯನ್ನು ರಚಿಸುವ ಅವಶ್ಯಕತೆ ಇರುತ್ತದೆ ಎಂದು ಉದ್ದೇಶಿಸಲಾಗಿರುತ್ತದೆ. ಈ ಉದ್ದೇಶದಿಂದ ಯೋಜನಾ ಅನುಷ್ಠಾನ ಸಮಿತಿಯನ್ನು ರಚಿಸಲಾಗಿದೆ. ಯೋಜನಾ ಅನುಷ್ಠಾನ ಸಮಿತಿಗೆ ಸಾವಯವ ಕೃಷಿ ಮಿಷನ್ ಅಧ್ಯಕ್ಷರಾಗಿರುತ್ತಾರೆ. ಸಮಿತಿಯ ಇತರೆ ಸದಸ್ಯರುಗಳು ;

(i) ನಿರ್ದೇಶಕರು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ.

(ii) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ.

(iii) ನಿರ್ದೇಶಕರು, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.

(iv) ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಕರ್ನಾಟಕ ಸರ್ಕಾರ.

(v) ನಿರ್ದೇಶಕರು, ರೇಷ್ಮೆ ಕೃಷಿ ಇಲಾಖೆ, ಕರ್ನಾಟಕ ಸರ್ಕಾರ.

(vi) ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ.

(vii) ಎರಡು ಸಾವಯವ ಕೃಷಿ ರೈತರು / ಪ್ರತಿ ಕಂದಾಯ ವಿಭಾಗದಲ್ಲಿ ಸಾವಯವ ಕೃಷಿ ಪದ್ಧತಿಗಳನ್ನು ಅನುಸರಿಸಿ ಕೆಲಸ ಮಾಡುತ್ತಿರುವ ವಿಜ್ಞಾನಿಗಳು

(viii) ಮುಖ್ಯ ಯೋಜನಾ ಅಧಿಕಾರಿ, ಕರ್ನಾಟಕ ಅಮೃತಭೂಮಿ- ಯೋಜನೆ – ಸದಸ್ಯ ಕಾರ್ಯದರ್ಶಿ.

ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮತ್ತು ನಿಶ್ಚಿತ ಪ್ರಗತಿ ಸಾಧಿಸುವ ದೃಷ್ಟಿಯಿಂದ ಸಮಿತಿಯು ಯೋಜನೆಯನ್ನು ಸಮನ್ವಯಗೊಳಿಸುತ್ತದೆ ಮತ್ತು ಉಸ್ತುವಾರಿ ಮಾಡುತ್ತದೆ. ಖರೀದಿ ಮತ್ತು ಗುತ್ತಿಗೆ ಆಡಳಿತ ಸೇರಿದಂತೆ ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಎಲ್ಲಾ ತೀರ್ಮಾನಗಳನ್ನು ಸಮಿತಿಯು ಕೈಗೊಳ್ಳುತ್ತದೆ. ಯೋಜನೆಗಳ ಉಸ್ತುವಾರಿ/ ಯೋಜನಾ ತಯಾರಿಕೆ, ಯೋಜನಾ ಅನುಷ್ಠಾನ ಮತ್ತು ಯೋಜನಾ ಆಡಳಿತ ಮಂಡಳಿಯ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸಮಿತಿಯು ಆಗಿಂದಾಗ್ಗೆ ಸಭೆ ಸೇರುತ್ತದೆ ಮತ್ತು ಯೋಜನಾ ಆಡಳಿತ ಮಂಡಳಿಯು ನೀಡುವ ನಿರ್ದೇಶನವನ್ನು ಪಾಲಿಸುವ ಬಗ್ಗೆ ಖಾತರಿಪಡಿಸುವುದು.

**(c) <u>ಅಮೃತ ಭೂಮಿ ಯೋಜನಾ ಅನುಷ್ಠಾನ ಘಟಕ</u> (Amruthabhoomi Project Implementation Unit (APIU):**

ಅನುಮೋದಿತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮುಖ್ಯ ಘಟಕವನ್ನು ಅಮೃತಭೂಮಿ ಯೋಜನಾ ಅನುಷ್ಠಾನ ಘಟಕ (APIU) ಎಂದು ಕರೆಯಲಾಗುವುದು ಮತ್ತು ಇದು ಬೆಂಗಳೂರಿನಲ್ಲಿ ನೆಲೆಸಿರುತ್ತದೆ. ಮುಖ್ಯ ಯೋಜನಾ ಅಧಿಕಾರಿಯು ಘಟಕದ ಮುಖ್ಯಸ್ಥರಾಗಿರುತ್ತಾರೆ. ಈ ಅಧಿಕಾರಿಯು ಸರ್ಕಾರದ ಜಂಟಿ ಕಾರ್ಯದರ್ಶಿ ಅಥವಾ ಅದಕ್ಕಿಂತ ಮೇಲ್ಪಟ್ಟದ ಅಧಿಕಾರಿಯಾಗಿರುತ್ತಾರೆ. ಮುಖ್ಯ ಯೋಜನಾ ನಿರ್ದೇಶಕರು ಮತ್ತು ತಾಂತ್ರಿಕ ಅಧಿಕಾರಿಗಳ ತಂಡವು ಮುಖ್ಯ ಯೋಜನಾ ಅಧಿಕಾರಿಗೆ ಕಾರ್ಯನಿರ್ವಹಣೆಯಲ್ಲಿ ನೆರವು ನೀಡಲಿದೆ.

ಅಮೃತ ಭೂಮಿ ಯೋಜನಾ ಅನುಷ್ಠಾನ ಘಟಕದ ಕೆಲಸ ಕಾರ್ಯಗಳನ್ನು ರೂಪಿಸಲಾಗಿದೆ.

**(d). <u>ಯೋಜನಾ ವಿಭಾಗ</u> (Project Division):-**

ನಾಲ್ಕು ಯೋಜನಾ ವಿಭಾಗಗಳನ್ನು ಸೃಷ್ಟಿಸಲು ಮತ್ತು ಇವುಗಳನ್ನು ಪ್ರತಿ ರೆವಿನ್ಯೂ ವಿಭಾಗಗಳಲ್ಲಿ ನೆಲೆಗೊಳಿಸಲು ಉದ್ದೇಶಿಸಲಾಗಿದೆ.ಯೋಜನಾ ವಿಭಾಗಗಳಿಗೆ ಉಪ ಕೃಷಿ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ ಮತ್ತ ಇವರಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು ನೆರವು ನೀಡಲಿದ್ದಾರೆ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯು ಯೋಜನಾ ವಿಭಾಗಗಳದ್ದಾಗಿರುತ್ತದೆ. ಈಗಾಗಲೇ ಚಾಲ್ತಿಯಲ್ಲಿರುವ ನಿಯಮಾನುಸಾರ ಅಥವಾ APIU ತಿಳಿಸುವ ಹೊಸ ನಿಯಮಾನುಸಾರ ಈ ವಿಭಾಗಗಳು ಕಾರ್ಯಕ್ರಮ ಅನುಷ್ಠಾನಗೊಳಿಸಲಿವೆ. ಯೋಜನಾ ಅನುಷ್ಠಾನ ವರದಿ ಮತ್ತು ಸಾಧನೆಗಳನ್ನು ಯೋಜನಾ ವಿಭಾಗಗಳು ನಿಯಮಿತವಾಗಿ APIU ಗೆ ನೀಡಲಿವೆ. ಪ್ರತಿ ಯೋಜನಾ ವಿಭಾಗದ ರಚನೆ ರೂಪಿಸಲಾಗಿದೆ.

**(e). ಸಾವಯವ ಕೃಷಿ ಸಮನ್ವಯ ಸಮಿತಿ <u>(Organic Farming Co-ordination Committee (OFCC):</u>**

ಯೋಜನಾ ಅನುಷ್ಠಾನ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಸಾವಯವ ಕೃಷಿ ಸಮನ್ವಯ ಸಮಿತಿಯನ್ನು ರಚಿಸಲಿದೆ. ಕೃಷಿ, ತೋಟಗಾರಿಕೆ, ರೇಷ್ಮೇ ಕೃಷಿ, ಪಶುಸಂಗೋಪನೆ, ಕಾಡಾ, ನೀರಾವರಿ, ಶಿಕ್ಷಣ ಮುಂತಾದ ಇಲಾಖೆಗಳ ಜಿಲ್ಲಾ ಮುಖ್ಯಸ್ಥರುಗಳು ಮತ್ತು ವಿಜ್ಞಾನಿಗಳು ಸಮಿತಿಯ ಸದಸ್ಯರಾಗಿರುತ್ತಾರೆ. ಯೋಜನಾ ಅನುಷ್ಠಾನ ಸಮಿತಿ ಅನುಮೋದಿತ ಮತ್ತು ನಾಮ ನಿರ್ದೇಶಿತ ಸಾವಯವ ಕೃಷಿಕರ ಗುಂಪುಗಳ ಪ್ರಮುಖ ಸಾವಯವ ಕೃಷಿಕರು ಸಮಿತಿಯ ಸದಸ್ಯರಾಗಿರುತ್ತಾರೆ. ಸಮಿತಿಯು ಆಗಿಂದಾಗ್ಗೆ ಸಭೆ ಸೇರಿ ಯೋಜನ ಅನುಷ್ಠಾನದಲ್ಲಿ ಸ್ಥಳೀಯ ಸಮನ್ವಯತೆ ಸಾಧಿಸಲೆಂದೆ ಮತ್ತು ಸ್ಥಳೀಯ ಸಮಸ್ಯೆಗಳನ್ನು ಇತ್ಯರ್ಥಪಡಿಸಲಿದೆ.

---

ಅನುಬಂಧ-2

**STAFF CHART:-**

| APIU | | STRUCTURE OF EACH PROJECT DIVISION | |
|---|---|---|---|
| **Designation** | **Number of Post** | **Designation** | **Number of Post** |
| Project Director (Joint Director Level officer from department of Agriculture / Horticulture / Sericulture or DCF (Forests) | **01** | - | - |
| Deputy Director, Agriculture /Sericulture/Horticulture | **03** | Deputy Director, Agriculture | **01** |
| Asst Conservator, Forest | **01** | Sericulture Extension | 01 |
| Assistant Director, Animal Husbandry | **01** | Assistant Director Horticulture | 01 |
| Joint Controller of Accounts | **01** | - | - |
| **Supporting Staff**<br>Data Entry Operators | 03 | First Division Accounts Assistant | 01 |
| Drivers | **02** | DEO | 01 |
| Accounts Superintendent | **01** | Attender | **01** |
| FDAA | **01** | - | - |
| SDAA | **01** | - | - |
| Grand Total | **15** | | **06** |

All new posts created should be filled through redeployment from the technical and ministerial staff available in the Department. Other support staff such as Data Entry Operators and Drivers should be taken through outsourcing.. The field level officers will ensure the effective implementaion of project activities and they will report to Chief Project Officer.